ಶ್ರೀ ಕೆ. ಎ. ಶಂಕರ ಗೌಡ.—ಕೆಲವು ನಂದರ್ಭಗಳಲ್ಲಿ ಅನುದಾನ ಕೊಡುವುದರಲ್ಲಿ ನಿಧಾನ ವಾಗಿದೆ. ಇದಕ್ಕೆ ಎರಡು ಮೂರು ಕಾರಣಗಳುಂಟು. ಸಾಧ್ಯವಾದಷ್ಟುಮಟ್ಟಿಗೆ ಇದನ್ನು ನಿವಾರಿಸುವುದಕ್ಕೆ ಪ್ರಯತ್ನ ಮಾಡುತ್ತೀದ್ದೇವೆ.

ಶ್ರೀ ಎಂ. ಎಂ. ಜೆ. ನದ್ಯೋಜಾತ.—ಶೈಕ್ಷಣಿಕ ಸಾಲು ಪ್ರಾರಂಭವಾಗುವುದರೊಳಗೆ ಗ್ರಾಂಟ್ ರಿಲೀಸ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರೇಗೌಡ.—ಈ ಪ್ರಶ್ನೆ ನರ್ಕಾರದ ಪರಿಶೀಲನೆಯಲ್ಲಿದೆ ಸ್ವಾಮಿ.

ಶ್ರೀ ಎನ್. ಎಂ. ಕೊಟ್ರಬನಯ್ಯ ಸೋಗಿ.—ಬಳ್ಳಾರಿ ಡೀಫಂಕ್ಟ್ ಡಿಸ್ಟ್ರಿಕ್ಟ್ ಬೋರ್ಡ್ ಆದಳಿತದಲ್ಲಿ ಆರ್ಥಿಕ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಅಲ್ಲಿ ಆಫೀಸಿನಲ್ಲಿ ಕೆಲವು ಸಿಬ್ಬಂದಿ ಸಹಿತ ಇಲ್ಲ, ಶಾಲಾಮಾಸ್ತರುಗಳ ನಂಬಳ, ಇಂಕ್ರಿಮೆಂಟ್, ಅರಿಯರ್ಸ್ ಮುಂತಾದುವೆಲ್ಲಾ ನರಿಯಾಗಿ ವ್ಯವಸ್ಥೆ ಆಗುತ್ತಿಲ್ಲ. ಇದಕ್ಕೆ ರಾಜ್ಯದ ವಿವಿಧ ಭಾಗಗಳಲ್ಲಿರುವಂತೆ ಇಲ್ಲಿಯೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಎ. ಶಂಕರ ಗೌಡ.—ನಂಬಳವನ್ನು ತಾರೀಖಿಗೆ ನರಿಯಾಗಿ ಕೊಡುತ್ತಿಲ್ಲ ಎನ್ನುವ ದೂರು ಇದೆ. ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಆಫೀಸರಿಂದ ಸ್ಟೇಟ್‌ಮೆಂಟ್ ಬರತಕ್ಕದ್ದು ನಿಧಾನವಾಗುತ್ತಿದೆ, ಕೆಲವು ವೇಳೆ ಆಕೌಂಟ್ಸ್ ಆಡಿಟ್ ಮಾಡತಕ್ಕದ್ದು ನಿಧಾನವಾಗಿದೆ ಮತ್ತು ಮದ್ರಾಸ್ ರೂಲ್ಸ್‌ನಂತೆ ಈಗ ನಂಬಳವನ್ನು ಕೊಡಲಾಗುತ್ತಿರುವುದರಿಂದ ಆ ರೂಲ್ಸ್ ಪ್ರಕಾರ ಸ್ವಲ್ಪ ಸುತ್ತಿ ಬಳಸಿ ಬರತಕ್ಕ ಪರಿಸ್ಥಿತಿಯಾಗಿದೆ. ಈ ಕಾರಣಕ್ಕಾಗಿ ನಂಬಳ ಕೊಡತಕ್ಕುದು ನಿಧಾನವಾಗಿದೆ. ಇನ್‌ಕ್ರಿಮೆಂಟ್ ವಗೈರೆ ವಿಷಯಗಳಲ್ಲಿ ಅಂಥ ತೊಂದರೆ ಏನೂ ಇಲ್ಲ. ಇದನ್ನು ಕೂಡ ನಿವಾರಣೆ ಮಾಡುವುದಕ್ಕೆ ನೂಕ್ತ ಪರಿಹಾರೋಪಾಯಗಳನ್ನು ನರಕಾರ ಕಂಡುಹಿಡಿಯುತ್ತಿದೆ.

ಶ್ರೀ ಎನ್. ಎಂ. ಕೊಟ್ರಬನಯ್ಯ ಸೋಗಿ.—ರಾಜ್ಯದ ಬೇರೆ ಭಾಗಗಳಲ್ಲಿರುವಂತೆ ಬಳ್ಳಾರಿ ಜಿಲ್ಲೆಯಲ್ಲಿಯೂ ಪ್ರಾಥಮಿಕ ಶಾಲೆಗಳನ್ನು ನರ್ಕಾರ ವಹಿಸಿಕೊಳ್ಳುವ ವಿಚಾರ ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರ ಗೌಡ.—ಅದನ್ನು ಕೂಡ ನರ್ಕಾರ ಪರಿಶೀಲಿಸುತ್ತಿದೆ.

Kukkasamudra Tank

*Q.—384. Sri K. M. THAMMIAH (Kadur).—

Will the Minister for Public Works be pleased to state :—

(*a*) whether any estimate has been prepared to repair Kukkasamudra Tank in Kadur Taluk ;

(*b*) if so, the amount of the estimate ;

(*c*) whether the same has been sanctioned ;

(*d*) if not, whether they would sanction the estimate and take up the work early ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*), (*c*), and (*d*). Does not arise in view of the reply to clause (*a*).

ಶ್ರೀ ಕೆ. ಎಂ. ತಮ್ಮಯ್ಯ.—ಕುಕ್ಕನಮುದ್ರ ಕೆರೆ 1,500 ಎಕರೆಗಳಷ್ಟಿದ್ದು ಪೊದಲು ಬಂದಿದ್ದುದು ಈಗ ಧತ್ತಿಯಂತಾಗಿ, ಅಜೂಬಾಜು ಏಳೆಂಟು ಹಳ್ಳಿಗಳು ಅಗಾಗ್ಗೆ ನೆಳ ಬಡ ರಾವಣಿಯಾಗುತ್ತಿರುವುದು ನರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ !

†ಆಲೂರು ಹನುಮಂತಪ್ಪ.—ಇದು ದೊಡ್ಡ ಕೆರೆ, 950 ಎಕರೆಗಳಿದೆ. ಇದಕ್ಕೆ ಸಿಲ್ಟ್ ಬರುತ್ತಿದೆ ಮತ್ತು ಉಪ್ಪು ನೀರಿನ ಪ್ರವಾಹದಿಂದ ಈ ಕೆರೆ ಮುಚ್ಚಿ ಹೋಗುತ್ತದೆ ಎನ್ನುವ ಅಭಿಪ್ರಾಯ ಸೂಕ್ತವಾದುದು.

ಶ್ರೀ ಕೆ. ಎಂ. ತಮ್ಮಯ್ಯ.—ಈ ಕೆರೆ ಅಗಲವಾಗುತ್ತಿರುವುದರಿಂದ ಸಾವಿರಾರು ತೆಂಗಿನ ಮರಗಳು ಕೂಡ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆ ಪ್ರದೇಶದ ರೈತರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದಾರೆ ಸ್ವಾಮಿ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಕೆರೆಯಿಂದ ಎರಡು ಮೂರು ಸಾವಿರ ಎಕರೆ ನೀರಾವರಿಯಾಗುವುದರಿಂದ ಆದಷ್ಟು ಬೇಗನೆ ದುರಸ್ತು ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈ ಕೆರೆಗೆ ಉಪ್ಪು ನೀರಿನ ಪ್ರವಾಹ ಬರುವುದನ್ನು ತಡೆಗಟ್ಟಲು ಒಂದು ಯೋಜನೆ ಈಗ ಸರ್ವೆ ಆಗ್ಗುತ್ತಿದೆ. ಸರ್ವೆ ಕೆಲಸವಾದ ಮೇಲೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

Deposit of amount by Private Institutions for opening New Colleges.

*Q.—491. Sri SIDDAIAH KASHIMATH (Shirahatti).—

Will the Minister for Education be pleased to state :—

(*a*) the amount to be deposited by the Private Institutions while opening a new college in the state ;

(*b*) whether Government would order to fix an uniform deposit amount for all the private institutions in the State ?

A.—Sri K. V. SHANKARA GOWDA (Minister for Education).—

a) *Vide* Annexure placed on the Table of the House**

(*b*) Conditions for affiliation are normally decided on the advice of the Universities. It is not considered feasible to have uniform rules.

ಶ್ರೀ ಸಿದ್ದಯ್ಯ ಕಾಶೀಮಠ.—ಮೈಸೂರು ಯೂನಿವರ್ಸಿಟಿಯವರು ಒಂದು ಕಾಲೇಜನ್ನು ಪ್ರಾರಂಭ ಮಾಡಬೇಕಾದರೆ 2 ಲಕ್ಷ, 5 ಲಕ್ಷ ಠೇವಣಿ ಕೇಳುತ್ತಾರೆ. ಹಾಗೆಯೇ ಕರ್ನಾಟಕ ಯೂನಿವರ್ಸಿಟಿಯವರು 1 ಲಕ್ಷದಿಂದ 3 ಲಕ್ಷದವರೆಗೆ ನಿಗದಿ ಮಾಡಿದ್ದಾರೆ. ಕೊನೆಯಪಕ್ಷ ತಾಲ್ಲೂಕು ಬೋರ್ಡ್‌ನವರು ಮತ್ತು ಮುನಿಸಿಪಾಲಿಟಿಯವರು ನಡೆಸತಕ್ಕ ಕಾಲೇಜುಗಳಿಗೆ ಏನಾದರೂ ಏನಾಯಿತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರ ಗೌಡ.—ಇದು ಆಯಾಯ ವಿಶ್ವವಿದ್ಯಾನಿಲಯದವರು ಪರಿಶೀಲನೆ ಮಾಡಬೇಕಾದಂಥ ಪ್ರಶ್ನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಮೈಸೂರು ಯೂನಿವರ್ಸಿಟಿಯವರು ಕರ್ನಾಟಕ ಯೂನಿವರ್ಸಿಟಿಯವರು ತುಂಬಾ ಠೇವಣಿ ಕೇಳುತ್ತಾರೆ. ಆದರೆ ಬೆಂಗಳೂರು ಯೂನಿವರ್ಸಿಟಿಯವರು ಮಾದರಿಯಾಗಿ ಅಫಿಲಿಯೇಷನ್ ಮಾಡುವಾಗ 750 ರಿಂದ 1,000 ರೂಪಾಯಿಯವರೆಗೆ ಕೇಳುತ್ತಾರೆ. ಬೆಂಗಳೂರು ಯೂನಿವರ್ಸಿಟಿಯವರು ಮಾಡಿರತಕ್ಕ ಈ ನಿಯಮವನ್ನು ಕರ್ನಾಟಕ ಮತ್ತು ಮೈಸೂರು ಯೂನಿವರ್ಸಿಟಿಯವರು ಅನುಸರಿಸಬೇಕೆಂದು ಆದೇಶ ನೀಡುತ್ತೀರಾ ?

**Copies placed in the Mysore Legislature Library. *Vide* No. 18, dated 13-7-1967.